ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 29-08-2022

ಜನವಾಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 92/2022 ಕಲಂ 279, 337, 338, 304(a) ಐಪಿಸಿ ಜೋತೆ 187 ಐ ಎಮ್ ವಿ ಆಕ್ಟ :-

ದಿನಾಂಕ: 28/08/2022 ರಂದು 1440 ಗಂಟೆಗೆ ಬೀದರ ಸರಕಾರಿ ಆಸ್ಪತ್ರೆಯಿಂದ ರಸ್ತೆ ಅಪಘಾತದ ಬಗ್ಗೆ ಮಾಹಿತಿ ಬಂದಿದ ಮೇರೆಗೆ ಆಸ್ಪತ್ರೆಗೆ ಭೇಟಿಕೊಟ್ಟು ಪ್ರಕರಣದಲ್ಲಿಯ ಗಾಯಾಳು ಅಂಕುಶ ತಂದೆ ಹಣಮಂತ ಮೇತ್ರೆ ಸಾ: ನಾಗೂರ(ಬಿ) ಇವನು ಮೃತಪಟ್ಟಿದ್ದು ಶವ ಪರಿಶೀಲಿಸಿ, ಇನ್ನೊಬ್ಬ ಗಾಯಾಳು ಶ್ರೀ ಉಮಾಕಾಂತ ತಂದೆ ಪಿರಗೊಂಡ ರಾಯಗೊಂಡ ಸಾ: ನಾಗೂರ(ಬಿ) ರವರಿಗೆ ವಿಚಾರಿಸಲಾಗಿ ಸದರಿಯವರು ತಮ್ಮ ಹೇಳಿಕೆ ದೂರು ನೀಡಿದ್ದು ಸಾರಾಂಶವೇನೆಂದರೆ, ದಿನಾಂಕ: 28/08/2022 ರಂದು ಮಧ್ಯಾಹ್ನ ಫಿರ್ಯಾದಿ ಮತ್ತು ಅಂಕುಶ ತಂದೆ ಹಣಮಂತ ಇಬ್ಬರು ಕೂಡಿ ಕುರಿಗಳಿಗೆ ಔಷಧ ತರಲು ಅಂಕುಶ ಇವನ ಹೊಂಡಾ ಶೈನ್ ಮೋಟಾರ್ ಸೈಕಲ್ ಮೇಲೆ ಲಾಲಬಾಗ್ ದಿಂದ ಬೀದರಕ್ಕೆ ಬರುವಾಗ ಅಂಕುಶ ಇವನು ಮೋಟಾರ್ ಸೈಕಲ್ ಚಲಾಯಿಸುತ್ತಿದ್ದು ಫಿರ್ಯಾದಿಯು ಹಿಂದುಗಡೆ ಕುಳಿತಿದ್ದು ನಾವು ಮೋಟಾರ ಸೈಕಲ್ ಮೇಲೆ ಲಾಲ್ ಬಾಗ್ ದಾಟಿ ಸ್ವಲ್ಪ ಮುಂದೆ ಬಂದಾಗ ಮಧ್ಯಾಹ್ನ 1 ಗಂಟೆ ಸುಮಾರಿಗೆ ಎದುರುಗಡೆಯಿಂದ ಮೋಟಾರ ಸೈಕಲ್ ನಂ. TS-08 FG-7271 ನೇದ್ದರ ಚಾಲಕ ಹಿಂದುಗಡೆ ಒಬ್ಬ ವ್ಯಕ್ತಿಗೆ ಕೂಡಿಸಿಕೊಂಡು ಮೋಟಾರ್ ಸೈಕಲನ್ನು ಅತೀ ವೇಗ ಹಾಗು ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ರೋಡಿನ ಎಡಭಾಗದಿಂದ ಹೋಗುತ್ತಿದ್ದ ನಮಗೆ ಅಪಘಾತಪಡಿಸಿರುತ್ತಾನೆ. ಇದ್ದರಿಂದ ಗಾಯಗೊಂಡ ಅಂಕುಶ ಇವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಚಿಕಿತ್ಸೆ ಪಲಕಾರಿಯಾಗದೇ ಮಧ್ಯಾಹ್ನ 3 ಗಂಟೆ ಸುಮಾರಿಗೆ ಮೃತಪಟ್ಟಿರುತ್ತಾನೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಚಿಟಗುಪ್ಪಾ ಪೊಲೀಸ ಠಾಣೆ ಅಪರಾಧ ಸಂಖ್ಯೆ 105/2022 ಕಲಂ 279, 337, 304(ಎ) ಐಪಿಸಿ ಜೊತೆ 187 ಐ.ಎಮ್.ವಿ. ಎಕ್ಟ :-

ದಿನಾಂಕ:28/08/2022 ರಂದು 0700 ಗಂಟೆಗೆ ಫಿರ್ಯಾದಿ ಜಗನಾಥ ತಂದ ಚಂದ್ರಪ್ಪಾ ಇಟಗಾಕರ, ವಯ:36 ವರ್ಷ, ಜಾ:ಎಸ್,ಟಿ, ಗೊಂಡ, ಉ:ಒಕ್ಕಲುತನ, ಸಾ/ಘಾತ್ಮಾಪೂರ ತಾ/ಚಿಟಗುಪ್ಪಾ ರವರು ನಿಡೀದ ಹೇಳಿಕೆ ಸಾರಂಶವೆನೆಂದರೆ ದಿನಾಂಕ:27/08/2022 ರಂದು ಸಾಯಂಕಾಲ 17.00 ಗಂಟೆಯ ಚಿಟಗುಪ್ಪಾದಿಂದ ಘಾತ್ಮಮಪೂರಗೆ ಹೋಗುವಾಗ ಚಿಟಗುಪ್ಪಾ-ಘಾತ್ಮಾಪೂರ ರೋಡ ಪ್ರೀಯದರ್ಶಿನಿ ಕಾಲೋನಿಯ ಫಾಕ್ಟರಿ ಹತ್ತಿರ ರೋಡಿನ ಮೇಲೆ ಆಟೋ ಚಾಲಕ ಶ್ರೀನಿವಾಸ @ ಶ್ರೀನಾಥ ಆಟೋ ಚಲಾಯಿಸಿಕೊಂಡು ಹೋಗುವಾಗ ಹಿಂದಿನಿಂದ ಅಂದರೆ ಚಿಟಗುಪ್ಪಾ ಕಡೆಯಿಂದ ಬಂದ ಒಂದು ಬಲೇರೋ ವಾಹನ ನಂ. ಕೆ.ಎ 36 ಬಿ 9352 ನೇದರ ಚಾಲಕನು ತನ್ನ ವಾಹನವನ್ನು ಅತಿವೇಗ ಹಾಗು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಆಟೋಕ್ಕೆ ಡಿಕ್ಕಿ ಮಾಡಿದಾಗ ಆಟೋ ಎಡಗಡೆ ತಗ್ಗಿನಲ್ಲಿ ಪಲ್ಟಿಯಾಗಿರುತ್ತದೆ. ಡಿಕ್ಕಿ ಮಾಡಿದ ವಾಹನ ಚಾಲಕನ್ನು ವಾಹನ ಸಮೇತ ಓಡಿ ಹೋಗಿರುತ್ತಾನೆ, ಅಪಘಾತದಿಂದ ಎಡಗಾಲು ಮೊಳಕಾಲಿಗೆ, ಬಲಗೈ ಮೊಳಕೈಗೆ ಭಾರಿ ರಕ್ತಗಾಯ ಮತ್ತು ತಲೆಗೆ, ಸೊಂಟಕ್ಕೆ ಗುಪ್ತಗಾಯವಾಗಿರುತ್ತದೆ. ಆಟೋದಲ್ಲಿದ್ದ ಇವರ ದೊಡ್ಡಪ್ಪ ಮಲ್ಲಪ್ಪಾ ತಂದೆ ಗುಂಡಪ್ಪಾ ಇಟಗಾಕರ, ವಯ 72 ವರ್ಷ ಇವರು ಗಾಯಗೊಂಡಿದ್ದರಿಂದ ಚಿಕಿತ್ಸೆ ಪಡೆಯುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ. ಕಾರಣ ಈ ಬಗ್ಗೆ ಕಾನೂನು ಕ್ರಮ ಜರುಗಿಸಲು ವಿನಂತಿ ಅಂತಾ ನೀಡಿದ ಹೇಳಿಕೆ ಪಡೆದುಕೊಂಡು ಸದರಿ ಫಿರ್ಯಾದಿ ಹೇಳಿಕೆ ಸಾರಂಶದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಮಾರ್ಕೆಟ ಪೊಲೀಸ ಠಾಣೆ ಅಪರಾಧ ಸಂಖ್ಯೆ 62/2022 ಕಲಂ 87 ಕೆ.ಪಿ.ಎಕ್ಟ :-

ದಿನಾಂಕ 28-08-2022 ರಂದು 1800 ಗಂಟೆಯ ಸುಮಾರಿಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ನನಗೆ ಬಾತ್ಮಿ ಬಂದಿದೆನಂದರೆ, ಬೀದರ ನಗರದ ನರಸಿಂಹ ಝುರಣಾ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಹಣ ಹಚ್ಚಿ ಪಣತೊಟ್ಟು ಅಂದರ ಬಾಹರ ಎಂಬ ನಸೀಬಿನ ಇಸ್ಪಿಟ ಜೂಜಾಟ ಆಡುತ್ತಿರುವ ಬಗ್ಗೆ ಬಾತ್ಮಿ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ರೋಡಿನ ಬದಿಯಲ್ಲಿ ಕೆಲವು ಜನರು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕ ಲೈಟಿನ ಬೆಳಕಿನಲ್ಲಿ ಹಣ ಹಚ್ಚಿ ಪಣತೊಟ್ಟು ಅಂದರ ಬಾಹರ ಎಂಬ ನಸೀಬಿನ ಇಸ್ಪಿಟ ಜೂಜಾಟ ಆಡುವದನ್ನು ನೋಡಿ ಖಚಿತಪಡಿಸಿಕೊಂಡು ಪಂಚರ ಸಮಕ್ಷಮ ದಾಳಿ ಮಾಡಿ ಅವರಿಗೆ ಅಲ್ಲೆ ಹಿಡಿದುಕೊಂಡು ಅವರ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಅವರ ಪೈಕಿ 1) ರಘುನಾಥ ತಂದೆ ಶೆಟೆಪ್ಪಾ ಗಾಯಕವಾಡ ವಯ 50 ವರ್ಷ ಜಾತಿ ಎಸ್.ಸಿ ಹೊಲಿಯ ಉ;ವಾಷಿಂಗ ಸೆಂಟರ ಸಾ:ಆಟೋ ನಗರ ನೌಬಾದ

ಬೀದರ ಅಂತಾ ತಿಳಿಸಿದ್ದು ಇವನ ಹತ್ತಿರ ಜೂಜಾಟಕ್ಕೆ ಉಪಯೋಗಿಸಿದ ನಗದು ಹಣ 8,300=00 ರೂ ಸಿಕ್ಕಿದ್ದು, 2) ಮಾಣಿಕ ತಂದೆ ಅಣೆಪ್ಪಾ ಅಣ್ಣಾನೂರ ವಯ 42 ವರ್ಷ ಜಾತಿ ಲಿಂಗಾಯತ ಉ;ಪ್ರೂಟ್ ವ್ಯಾಪಾರ ಸಾ:ವಿದ್ಯಾಶ್ರೀ ಶಾಲೆ ಮುಂದೆ ಮೈಲೂರ ಬೀದರ ಅಂತಾ ತಿಳಿಸಿದ್ದು ಇವನ ಹತ್ತಿರ ನಗದು ಹಣ 10,450=00 ರೂ ಸಿಕ್ಕಿದ್ದು, 3) ನಾಗಶೆಟ್ಟಿ ತಂದೆ ಅಮೃತರಾವ ಬಳತೆ ವಯ 38 ವರ್ಷ ಜಾತಿ ಲಿಂಗಾಯತ ಉ;ಒಕ್ಕಲುತನ ಸಾ:ಹಿಪ್ಪಳಗಾಂವ ಗ್ರಾಮ ತಾ:ಜಿ;ಬೀದರ ಅಂತಾ ತಿಳಿಸಿದ್ದು ಇವನ ಹತ್ತಿರ ನಗದು ಹಣ 11,395=00 ರೂ 4) ವಿರೇಂದ್ರ ತಂದೆ ಚಂದ್ರಕಾಂತ ಪೊಲೀಸ್ ಪಾಟೀಲ ವಯ 33 ವರ್ಷ ಜಾತಿ ಲಿಂಗಾಯತ ಉ;ಒಕ್ಕಲುತನ ಸಾ:ಗೌಡಗಾಂವ ಗ್ರಾಮ ತಾ:ನಾರಾಯಣಖೇಡ ಅಂತಾ ತಿಳಿಸಿದ್ದು ಇವನ ಹತ್ತಿರ ನಗದು ಹಣ 7,500=00 ರೂ ಸಿಕ್ಕಿದ್ದು 5) ಸತೀಶ ತಂದೆ ಶಿವಶಂಕರ ಗುಮ್ಮಾ ವಯ 25 ವರ್ಷ ಜಾತಿ ಲಿಂಗಾಯತ ಉ;ಒಕ್ಕಲುತನ ಸಾ:ಸರ್ದಾರ ವಲ್ಲಬಭಾಯಿ ಪಟೇಲ್ ನಗರ ಜೇಲ್ ಹಿಂದುಗಡೆ ಬೀದರ ಅಂತಾ ತಿಳಿಸಿದ್ದು ಇವನ ಹತ್ತಿರ ನಗದು 5,250=00 ರೂ ಸಿಕ್ಕಿದ್ದು 6) ನಾಗರಾಜ ತಂದೆ ಪ್ರಭು ಖೌದೆ ವಯ 42 ವರ್ಷ ಜಾತಿ ಲಿಂಗಾಯತ ಉ;ಒಕ್ಕಲುತನ ಸಾ:ಬಸಂತಪೂರ ಗ್ರಾಮ ತಾ:ಜಿ;ಬೀದರ ಅಂತಾ ತಿಳಿಸಿದ್ದು ಇವನ ಹತ್ತಿರ ನಗದು ಹಣ 13,400=00 ರೂ 7) ರಮೇಶ ತಂದೆ ವೀರಶೆಟ್ಟಿ ಕೊಡಂಬಲ ವಯ 48 ವರ್ಷ ಜಾತಿ ಲಿಂಗಾಯತ ಉ;ಒಕ್ಕಲುತನ ಸಾ:ಖೇಣಿ ರಂಜೋಳ ಗ್ರಾಮ ತಾ:ಜಿ;ಬೀದರ ಅಂತಾ ತಿಳಿಸಿದ್ದು ಇವನ ಹತ್ತಿರ ನಗದು ಹಣ 11,350=00 ರೂ ಸಿಕ್ಕಿದ್ದು 8) ಸೂರ್ಯಕಾಂತ ತಂದೆ ಮಾದಪ್ಪಾ ಬಿರಾದಾರ ವಯ 42 ವರ್ಷ ಜಾತಿ ಲಿಂಗಾಯತ ಉ;ಒಕ್ಕಲುತನ ಸಾ:ಗುಮ್ಮಾ ಕಾಲೋನಿ ಬೀದರ ಅಂತಾ ತಿಳಿಸಿದ್ದು ಇವನ ಹತ್ತಿರ ನಗದು ಹಣ 7,650=00 ರೂ ಸಿಕ್ಕಿದ್ದು  ಹೀಗೆ ಒಟ್ಟು ನಗದು ಹಣ 75,295=00 ರೂ ಸಿಕ್ಕಿರುತ್ತವೆ. ಎಲ್ಲರ ನಡು ಇದ್ದ 52 ಇಸ್ಪಿಟ ಎಲೆಗಳು ಸಿಕ್ಕಿದ್ದು ಇವುಗಳನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಮನ್ನಾಏಖೆಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 91/2022 ಕಲಂ 457, 380 ಐಪಿಸಿ :-

ದಿನಾಂಕ:28/08/2022 ರಂದು 13:00 ಗಂಟೆಗೆ ಫಿರ್ಯಾದಿ ಶ್ರೀ ಝುರೇಪ್ಪಾ ತಂದೆ ಜಟ್ಟೆಪ್ಪಾ ಜಮಾದಾರ ವಯ 35 ವರ್ಷ ಜಾತಿ: ಕಬ್ಬಲೀಗ ಉದ್ಯೋಗ: ಒಕ್ಕಲುತನ ಜೋತೆಗೆ ಮಹರ್ಷಿ ವಾಲ್ಮೀಕಿ ಮಂದಿರದ ಕಾರ್ಯದರ್ಶಿ ಸಾ||ಶಾಮತಾಬಾದ ತಾ||ಚಿಟಗುಪ್ಪಾ ಜಿಲ್ಲಾ||ಬೀದರ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಂಶವೇನೆಂದರೆ  ದಿನಾಂಕ: 27/08/0222 ರಂದು ಅಮವಾಸೆ ಇದ್ದ ಪ್ರಯುಕ್ತ ನಮ್ಮೂರ ಜನರು ಮಹರ್ಷಿ ವಾಲ್ಮೀಕಿ ಮಂದಿರದಲ್ಲಿ ರಾತ್ರಿ 11 ಗಂಟೆ ವರೆಗೆ ಭಜನೆ ಕಾರ್ಯಕ್ರಮ ನಡೆದಿರುತ್ತದೆ. ಮರು ದಿವಸ ಅಂದರೆ ದಿನಾಂಕ:28/08/2022 ರಂದು 06:15 ಗಂಟೆ ಸುಮಾರಿಗೆ ಮಹರ್ಷಿ ವಾಲ್ಮೀಕಿ ಮಂದಿರದ ಪೂಜೆ ಮಾಡುವ ಪೂಜಾರಿಯಾದ  ಗುಂಡೇಶ ಭಾವಿದೋಡ್ಡಿ ರವರು  ತಿಳಿಸಿದ್ದೆನೆಂದರೆ ಮಹರ್ಷಿ ವಾಲ್ಮೀಕಿ ಮಂದಿರದಲ್ಲಿ ದಿನನಿತ್ಯದಂತೆ ಪೂಜೆ ಮಾಡಲು ಮುಂಜಾನೆ 06:00 ಗಂಟೆಗೆ ಹೊದಾಗ ದೇವಾಸ್ಥಾನದ ಗೇಟಿಗೆ ಇದ್ದ ಚಾವಿ ಮುರಿದಿದ್ದು ದೇವಸ್ಥಾನದಲ್ಲಿ ಎಲ್ಲಾ ವಸ್ತುಗಳು ಚಲ್ಲಾಪಿಲ್ಲಿಯಾಗಿದ್ದು ನೋಡಲು ದೇವಸ್ಥಾನದಲ್ಲಿ ಇದ್ದ ವಸ್ತುಗಳು ಯಾರೋ ಅಪರಿಚಿತ ಕಳ್ಳಲು ಕಳವು ಮಾಡಿಕೊಂಡು ಹೊಗಿರುತ್ತಾರೆ ಅಂತ ತಿಳಿಸಿದ ತಕ್ಷಣ  ಮಹರ್ಷಿ ವಾಲ್ಮೀಕಿ ಮಂದಿರಕ್ಕೆ  ಹೊಗಿ ನೊಡಲು ದೇವಸ್ಥಾನದ ಮಂದಿರದ ಗೇಟ ಚಾವಿ ಮುರಿದಿದ್ದು ದೇವಸ್ಥಾನದಲ್ಲಿ ಇದ್ದ 1] ಒಂದು ಎಂಪ್ಲೇಫೈರ್ ಬಾಕ್ಸ ಅ.ಕಿ 8,495/-, 2]ಒಂದು ಹಿತ್ತಾಳೆ ಘಂಟೆ 10,000/-3]ಒಂದು ಹಿತ್ತಾಳೆಯ ದೀಪಾ ಸಮಕ್ಷೆ ಅ.ಕಿ 8,358/- 4]ಎರಡು ಹಿತ್ತಾಳೆ ಸಮೆ ಅ.ಕಿ 4850/- 5]ಎರಡು ಹಿತ್ತಾಳೆ ತಟ್ಟೆ ಅ.ಕಿ 2850/- 6] ಎರಡು ಹಿತ್ತಾಳೆ ನಂದಾದೀಪಾ ಅ.ಕಿ 930/- 7]ಒಂದು ಊದಿನಕಡ್ಡಿ ಹಚ್ಚುವ ಹಿತ್ತಾಳೆಯ ಹುಂಜಿ 14,00/- 8]ಒಂದು ಕಬ್ಬಿಣದ ಹುಂಡಿ ಅದರಲ್ಲಿ ಅಂದಾಜು 600/- ರೂ ನಗದು ಹಣ ಹೀಗೆ ಒಟ್ಟು – 37,483/- ಯಾರೋ ಅಪರಿಚಿತ ಕಳ್ಳಲು ದಿನಾಂಕ: 27/08/2022 ರಂದು ರಾತ್ರಿ 11 :30 ಗಂಟೆಯಿಂದ ದಿನಾಂಕ: 28/08/2022 ರಂದು 06:00 ಗಂಟೆಯ ಮಧ್ಯದ ಅವಧಿಯಲ್ಲಿ ಕಳವು ಮಾಡಿಕೊಂಡು ಹೊಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಮನ್ನಾಎಖೇಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 92/2022 ಕಲಂ 379 ಐಪಿಸಿ :-

ದಿನಾಂಕ: 28/08/2022 ರಂದು 18:00 ಗಂಟೆಗೆ ಫಿರ್ಯಾದಿ ಶ್ರೀ ಮೊಹಮ್ಮದ ಜಾವೀದ ತಂದೆ ಪಾಶಾಮಿಯ್ಯಾ ಚಿಟ್ಟಗುಪ್ಪಾ ವಯ: 35 ವರ್ಷ ಜಾ: ಮುಸ್ಲಿಂ ಉ: ಪಾನ ಷಾಪ ಸಾ: ನೀರ್ಣಾ ಗ್ರಾಮ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ಸಲ್ಲಿಸಿದ್ದು ಸಾರಂಶವೆನೆಂದರೆ ನಿರ್ಣಾ ಗ್ರಾಮದಲ್ಲಿ ಒಂದು ಪಾನ ಡಬ್ಬಿ ಇಟ್ಟುಕೊಂಡು ಉಪಜೀವಿಸುತ್ತಿದ್ದು ದಿನ ನಿತ್ಯಾ ಮುಂಜಾನೆ 07:00 ಗಂಟೆಯಿಂದ ರಾತ್ರಿ 21:00 ಗಂಟೆಯವರೆಗೆ ತೆರದು ವ್ಯಾಪಾರ ಮಾಡುತ್ತಿದ್ದು  ರಾತ್ರಿ 21:00 ಗಂಟೆಗೆ ನನ್ನ ಡಬ್ಬಿ ಮುಚ್ಚಿ ಮನೆಗೆ ಹೋಗಿದ್ದಾಗ  ಯಾರೊ ಅಪರಿಚಿತ ಕಳ್ಳರು ಗುಸಿಯಿಂದ ಪಾನ ಡಬ್ಬಿ ಒಡೆದು ಡಬ್ಬಿಯಲ್ಲಿದ್ದ 1) ಸ್ಮಾಲ ಗೊಲ್ಡ ಪ್ಲ್ಯಾಕ್ ಒಂದು ಬಾಕ್ಸ ಅ, ಕಿ 4550/- ರೂ 2) ಸಾಗರ ಗುಟ್ಕಾ ಒಂದು ಪ್ಯಾಕ ಅ, ಕಿ, 7,700/- ರೂ 3) ವಿಮಲ ಗುಟ್ಕಾ 25 ಪ್ಯಾಕ ಅ, ಕಿ 3150/- ರೂ 4) ಆರ್ ಆರ್ ಗುಟ್ಕಾ 10 ಪ್ಯಾಕ ಅ, ಕಿ, 1250/- ರೂ 5) ಬೀಡಿ 10 ಪ್ಯಾಕೆಟ್ ಅ, ಕಿ 3600/- ರೂ 6) ನಗದು ಹಣ 8,000/- ರೂ ಹೀಗೆ

ಒಟ್ಟು 28,250 /- ರೂ ಬೇಲೆ ಬಾಳುವ ವಸ್ತುಗಳು ದಿನಾಂಕ 25/08/2022 ರಂದು ರಾತ್ರಿ 22:00 ಗಂಟೆಯಿಂದ ದಿನಾಂಕ: 26/08/2022 ರಂದು 04:00 ಗಂಟೆಯ ಮಧ್ಯದ ಅವಧಿಯಲ್ಲಿ ಕಳವು ಮಾಡಿಕೊಂಡು ಹೊಗಿರುತ್ತಾರೆ, ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 102/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ: 28/08/2022 ರಂದು 16;30 ಗಂಟೆಗೆ ಠಾಣೆಯಲ್ಲಿದ್ದಾಗ ಗುಪ್ತ ಮಾಹಿತಿ ಬಂದಿದೇನೆಂದರೆ ಜಾನಾಪೂರ ಗ್ರಾಮದ ಶಿವಾರದಲ್ಲಿ ಜೀಜಾಬಾಯಿ ರವರ ಹೋಲದಲ್ಲಿ ಶೆಡ್ಡಿನ ಹತ್ತಿರ ಖುಲ್ಲಾ ಜಾಗೆಯಲ್ಲಿ ಕೆಲವು ಜನರು ಗೋಲಾಕಾರವಾಗಿ ಕುಳಿತು ಹಣವನ್ನು ಪಣಕ್ಕೆ ಇಟ್ಟು ಅಂದರಭಾಹರ್ ಇಸ್ಪೇಟ ಜೂಜಾಟ ಆಡುತಿದ್ದಾರೆ ಅಂತಾ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಖುಲ್ಲಾ ಜಾಗೆಯಲ್ಲಿ ಕುಳಿತುಕೊಂಡು ಹಣವನ್ನು ಪಣಕ್ಕೆ ಇಟ್ಟು ಅಂದರಭಾರ್ ಎಂಬ ನಶಿಬಿನ ಇಸ್ಪೇಟ ಜೂಜಾಟ ಆಡುತಿದ್ದನ್ನು ಖಚಿತ ಪಡಿಸಿಕೊಂಡು 18:10 ಗಂಟೆಗೆ ಪಂಚರ ಸಮಕ್ಷಮ ಹಾಗೂ ಸಿಬ್ಬಂದಿಯವರ ಸಾಹಾಯದಿಂದ ಸದರಿಯವರ ಮೇಲೆ ದಾಳಿ ಮಾಡಿ ಸುತ್ತುವರೆದು ಹಿಡಿಯುವಾಗ ಅವರ ಪೈಕಿ ಇಬ್ಬರು ಓಡಿ ಹೋಗಿದ್ದು ಉಳಿದ ನಾಲ್ಕು ಜನರನ್ನು ಹಿಡಿದು ಒಬ್ಬೊಬ್ಬರ ಹೆಸರು ಮತ್ತು ವಿಳಾಸ ವಿಚಾರಿಸಲು ತಮ್ಮ ಹೆಸರು 1] ರಿಯಾಜೋದ್ದಿನ ತಂದೆ ಅಬ್ದುಲ ಕರೀಮ ಡ್ರೈವರ ವಯ:46 ವರ್ಷ ಜಾತಿ:ಮುಸ್ಲಿಂ ಉ:ವ್ಯಾಪಾರ ಸಾ:ಲಾಲತಲಾಬ ಬಸವಕಲ್ಯಾಣ ಅಂತಾ ತಿಳಿಸಿದ್ದು ಇವನ ಹತ್ತಿರ 3300 ರೂ ಇದ್ದವು 2] ಜಕಿ ತಂದೆ ಎಂ,ಡಿ ಹುಸೇನ ಖುರೇಷಿ ವಯ:46 ವರ್ಷ ಜಾತಿ:ಮುಸ್ಲಿಂ ಉ:ವ್ಯಾಪಾರ ಸಾ:ಅಮೀರಪೇಟ ಕಾಲೋನಿ ಬಸವಕಲ್ಯಾಣ ಅಂತಾ ತಿಳಿಸಿದ್ದು ಇವನ ಹತ್ತಿರ 2750 ರೂ ಇದ್ದವು 3] ತಾಜೋದ್ದಿನ ತಂದೆ ರಹಿಮೋದ್ದಿನ ಅಬ್ಬಾ ವಯ: 48 ವರ್ಷ ಜಾತಿ:ಮುಸ್ಲಿಂ ಉ:ಕಾರಪೆಂಟರ್ ಸಾ; ಅಮೀರಪೇಟ ಕಾಲೋನಿ ಬಸವಕಲ್ಯಾಣ ಅಂತಾ ತಿಳಿಸಿದ್ದು ಸದರಿಯವನ ಹತ್ತಿರ 3150 ರೂ ಇದ್ದವು 4] ಹುಸೇನ ತಂದೆ ಖಾಸೀಮ ಸಾಬ ಬಡೆಸಾಬ ವಯ:54 ವರ್ಷ ಜಾತಿ;ಮುಸ್ಲಿಂ ಉ:ಡ್ರೈವರ ಸಾ:ಲಾಲತಲಾಬ ಬಸವಕಲ್ಯಾಣ ತಿಳಿಸಿದ್ದು ಇವನ ಹತ್ತಿರ 2950 ರೂ ಇದ್ದವು ಮತ್ತು ಎಲ್ಲರ ಮಧ್ಯದಲ್ಲಿ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 5,180/- ರೂಗಳು ಇದ್ದವು ನಂತರ ಓಡಿ ಹೋದವರು ಹೆಸರು ವಿಚಾರಿಸಲು 5] ಅಸದ ಶಹಾಪೂರ ಗಲ್ಲಿ ಬಸವಕಲ್ಯಾಣ 6)ತಾಜ ಶಹಾಪೂರ ಗಲ್ಲಿ ಬಸವಕಲ್ಯಾಣ ಅಂತಾ ತಿಳಿಸಿದಾಗ ಪುನಃ ವಿಚಾರಣೆ ಮಾಡಲು ತಾವೆಲ್ಲರೂ ಸೆರಿ ಹಣವನ್ನು ಪಣಕ್ಕೆ ಇಟ್ಟು ಅಂದರಭಾಹರ್ ಎಂಬ ನಶಿಬಿನ ಇಸ್ಪೇಟ ಜೂಜಾಟ ಆಡುತಿದ್ದ ಬಗ್ಗೆ ಒಪ್ಪಿಕೊಂಡಿದರಿಂದ ಸದರಿಯವರು ಇಸ್ಪೆಟ ಜೂಜಾಟದಲ್ಲಿ ತೋಡಗಿಸಿದ ಒಟ್ಟು ನಗದು ಹಣ 17,330/- ರೂ ಹಾಗು 52 ಇಸ್ಪೇಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.